ದಿನಾಂಕ : 10.09.2012

ಓ.ಎಸ್. 54:11

ಪಿ.ಡಬ್ಲ್ಯು.1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಸಿ ಬಿ ಎಂ ರವರಿಂದಃ**

—

ನನ್ನ ಹೇಳಿಕೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿವೆ.

ಈ ಕೆಳಕಂಡ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ. ಅವುಗಳನ್ನು ಈ ಕೆಳಕಂಡಂತೆ ನಿಶಾನಿಸಲಾಗಿದೆ.

ನಿ ಪಿ 1 ಆರ್ ಎಫ್ ಎ 384:2002 ರ ತೀರ್ಪಿನ ದೃಢೀಕೃತ ನಕಲು
ನಿ ಪಿ 2 ರಿಂದ ನಿ ಪಿ 4 ಆರ್ ಟಿ ಸಿ ಗಳು
ನಿ ಪಿ 5 ತೆರಿಗೆ ವಿಧಿಸುವ ಪಟ್ಟಿಯ ದೃಢೀಕೃತ ನಕಲು ಪ್ರತಿ

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ ರವರಿಂದ :**

**ಪ್ರತಿವಾದಿ ಪರ ವಕೀಲರ ಕೋರಿಗೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಒ.ಹೇ.ಕೇ. ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**

ದಿನಾಂಕ : 18.03.2013

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಸಿ ಬಿ ಎಂ ರವರಿಂದಃ**

ಈ ಕೆಳಕಂಡ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ. ಅವುಗಳನ್ನು ಈ ಕೆಳಕಂಡಂತೆ ನಿಶಾನಿಸಲಾಗಿದೆ.

ನಿ ಪಿ 6 ಓ ಎಸ್ 29:2000 ರ ವಾದಪತ್ರದ ದೃಢೀಕೃತ ನಕಲು
ನಿ ಪಿ 7 ಓ ಎಸ್ 29:2000 ರ 1ನೇ ಪ್ರತಿವಾದಿಯ ಲಿಖಿತ ಹೇಳಿಕೆಯ ದೃಢೀಕೃತ ನಕಲು
ನಿ ಪಿ 8 ಓ ಎಸ್ 29:2000 ರ 3 ರಿಂದ 7 ನೇ ಪ್ರತಿವಾದಿಯರ ಲಿಖಿತ ಹೇಳಿಕೆಯ ದೃಢೀಕೃತ ನಕಲು
ನಿ ಪಿ 9 ಓ ಎಸ್ 29:2000 ರ ವಿವಾದಾಂಶಗಳ ದೃಢೀಕೃತ ನಕಲು
ನಿ ಪಿ 10 ಓ ಎಸ್ 29:2000 ರ ತೀರ್ಪು ಮತ್ತು ಡಿಕ್ರಿಯ ದೃಢೀಕೃತ ನಕಲು
ನಿ ಪಿ 11 ಓ ಎಸ್ 29:2000 ರ ಪಿಡಬ್ಲ್ಯೂ 1 ರವರ ಸಾಕ್ಷ್ಯದ ದೃಢೀಕೃತ ನಕಲು
ನಿ ಪಿ 12 ಓ ಎಸ್ 29:2000 ರ ಡಿಡಬ್ಲ್ಯೂ 1 ರವರ ಸಾಕ್ಷ್ಯದ ದೃಢೀಕೃತ ನಕಲು

**ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಾದ ಶ್ರೀ ರವರಿಂದ :**

**ಪ್ರತಿವಾದಿ ಪರ ವಕೀಲರ ಕೋರಿಗೆ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಒ.ಹೇ.ಕೇ. ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**

ದಿನಾಂಕ ಃ 17.06.2013

ಓ.ಎಸ್. 54:11

ಪಿ.ಡಬ್ಲು.1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್ ವಿ ಬಿ ರವರಿಂದ ಃ</u>**

ಓ ಎಸ್ 29ಃ2000 ದಾವೆಯನ್ನು ನಾನು ನನ್ನ ತಾಯಿ ಹಾಗೂ ನನ್ನ ಅಕ್ಕ ತಂಗಿಯರು ಎಲ್ಲರೂ ಒಟ್ಟಿಗೆ ಕೇಸು ನಡೆಸುತ್ತಿದ್ದೆವು ಎಂದರೆ ನಿಜ. ಸದರಿ ದಾವೆಯನ್ನು ನನ್ನ ತಾಯಿಯವರು ಹಾಕಿದ್ದು ಸದರಿ ಕೇಸಿನಲ್ಲಿ ವಕೀಲರನ್ನು ನಾನೇ ನೇಮಕ ಮಾಡಿಸಿದ್ದೆ. ಸದರಿ ಕೇಸು ನನ್ನ ಅಣ್ಣ ಅಂದರೆ ಈ ಕೇಸಿನ 1ನೇ ಪ್ರತಿವಾದಿಯ ವಿರುದ್ಧ ಡಿಕ್ರಿಯಾಗಿರುವುದಿಲ್ಲ ಎಂದರೆ ನನಗೆ ಹೇಳಲಾಗುವು ದಿಲ್ಲ. ಸದರಿ ದಾವೆಯನ್ನು ನನ್ನ ತಾಯಿಯವರು ನನ್ನ ತಂದೆ ಮರಣ ಶಾಸನ ಪತ್ರ ಬರೆದ ವಿಚಾರದಲ್ಲಿ ದಾಖಲು ಮಾಡಿದ್ದು ಆಸ್ತಿ ಭಾಗದ ಬಗ್ಗೆ ಸದರಿ ಕೇಸು ಹಾಕಿರಲಿಲ್ಲ ಎಂದರೆ ನಿಜ. ಸದರಿ ಕೇಸಿನಲ್ಲಿ ಭಾಗದ ವಿಚಾರದಲ್ಲಿ ಯಾವುದೇ ಪ್ರಸ್ತಾಪ ಆಗಿರಲಿಲ್ಲ ಎಂದರೆ ನಿಜ. ನಮ್ಮ ಒಟ್ಟು ಕುಟುಂಬದ ಆಸ್ತಿಗಳು ವಿಭಾಗ ಆಗಿರುತ್ತವೆ ಎಂದರೆ ಸರಿಯಲ್ಲ. ನಾನು, ಉಳಿದ ವಾದಿಯರು ಮತ್ತು ನನ್ನ ಅಣ್ಣ 1ನೇ ಪ್ರತಿವಾದಿ ಹಾಗೂ ನನ್ನ ಅಕ್ಕತಂಗಿಯರು ಯಾರೂ ಸಹ ಒಟ್ಟು ಕುಟುಂಬದಲ್ಲಿ ವಾಸ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವಾ ಸ್ವತ್ತುಗಳು ಈ ದಾವೆ ದಾಖಲು ಮಾಡುವ ಕಾಲಕ್ಕೆ ಒಟ್ಟು ಕುಟುಂಬದ ಆಸ್ತಿಗಳಾಗಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕ ತಂಗಿಯರು ಯಾರೂ ಸಹ ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಭಾಗಾಂಶ ಕೇಳುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತುಗಳಲ್ಲಿ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ಸ್ವಲ್ಪ ಸ್ವಲ್ಪ ಸ್ವತ್ತುಗಳಲ್ಲಿ ಸ್ವಾಧೀನ ಇರುತ್ತಾರೆ ಎನ್ನುತ್ತಾರೆ. ನನ್ನ ತಾಯಿಯವರು ಅರ್ಧ ಎಕರೆ ಜಮೀನಿನಲ್ಲಿ ಸ್ವಾಧೀನ ಇದ್ದು ಮತ್ತು ಮನೆಯ ವಾರ್‌ಪಾಕ್ ಅಂದರೆ ತೀರುಭಾಗದಲ್ಲಿ ವಾಸವಿದ್ದಾರೆ. ನಮ್ಮ ಕುಟುಂಬದ ವಾಸದ ಮನೆಯಲ್ಲಿ ನಾನು ಒಂದು ಭಾಗದಲ್ಲಿ ಹಾಗೂ ನನ್ನ ಅಣ್ಣ 1ನೇ ಪ್ರತಿವಾದಿ ಒಂದು ಭಾಗದಲ್ಲಿ ವಾಸ ಇದ್ದೇವೆ. ಒಟ್ಟು ಮನೆಯ ಪೈಕಿ 1ನೇ ಪ್ರತಿವಾದಿ ಪೂರ್ವ ಭಾಗದಲ್ಲಿ ವಾಸ ಇದ್ದಾರೆ. ನಾನು ಮಧ್ಯಭಾಗದಲ್ಲಿ ವಾಸ ಇದ್ದೇನೆ. ನನ್ನ ತಾಯಿ ಪಶ್ಚಿಮ ಭಾಗದಲ್ಲಿ ವಾಸ ಇದ್ದಾರೆ. ಸುಮಾರು 20 ವರ್ಷಗಳಿಂದಲೂ ಆ ರೀತಿ ನಾವುಗಳು ಸದರಿ ಮನೆಯಲ್ಲಿ ವಾಸ ಇದ್ದೇವೆ. ನಾನು ಮತ್ತು ನನ್ನ ಅಣ್ಣ 1ನೇ ಪ್ರತಿವಾದಿ ಕಳೆದ 8 ವರ್ಷಗಳಿಂದ ನಮ್ಮ ನಮ್ಮ ಕುಟುಂಬದ ನಿರ್ವಹಣೆ ಮಾಡಿಕೊಂಡು ಪ್ರತ್ಯೇಕವಾಗಿ ವ್ಯವಹಾರ ನಡೆಸಿಕೊಂಡು ಪ್ರತ್ಯೇಕ ಅಡಿಗೆ ಮಾಡಿಕೊಂಡು ವಾಸ ಇದ್ದೇವೆ. ನಾವು ವಾಸಕ್ಕೆ ಬೇರೆ ಬೇರೆಯಾಗಿ ಬಂದ ದಿನದಿಂದಲೂ ನಾವು ಪ್ರತ್ಯೇಕವಾಗಿ ನಮ್ಮ ಕುಟುಂಬದ ವ್ಯವಹಾರಗಳನ್ನು ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನಅಕ್ಕತಂಗಿಯರು ಮದುವೆಯಾದಗಿನಿಂದ ಅವರವರ ಗಂಡಂದಿರ ಮನೆಯಲ್ಲಿ ವಾಸ ಇದ್ದು ಹಬ್ಬ ಹರಿದಿನಗಳಲ್ಲಿ ನಮ್ಮ ಮನೆಗೆ ಬಂದು ಹೋಗುತ್ತಾರೆ.

**ಪ್ರತಿವಾದಿ ಪರ ವಕೀಲರ ಕೋರಿಗೆ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**ಮರು ವಿಚಾರಣೆ : ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಒ.ಹೇ.ಕೇ. ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**

ದಿನಾಂಕ ಃ 03.09.2013

ಓ.ಎಸ್. 54:11

ಪಿ.ಡಬ್ಲ್ಯು.1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ ಪರ ವಕೀಲರಾದ ಶ್ರೀ ಹೆಚ್ ವಿ ಬಿ ರವರಿಂದ ಃ**

ನನ್ನ ತಂದೆಯವರ ಮೂಲ ಸ್ಥಳ ಮಾಗಡಿ ತಾಲ್ಲೋಕು, ತಾವರೆಕೆರೆ ಹೋಬಳಿ, ಚಿಕ್ಕನಹಳ್ಳಿ ಗ್ರಾಮ ಎಂದರೆ ನಿಜ. ನನ್ನ ತಂದೆಯವರ ಜೊತೆ ಹುಟ್ಟಿದವರು ಪುಟ್ಟಯ್ಯ ಮತ್ತು ನಿಂಗಾಚಾರಿ ಇದ್ದಾರೆ. ನನ್ನ ತಂದೆಯವರು ಆತನ ಚಿಕ್ಕ ವಯಸ್ಸಿನಲ್ಲಿ ನಿಂಗಾಚಾರಿಯನ್ನು ತನ್ನ ಜೊತೆಯಲ್ಲಿ ಕರೆದುಕೊಂಡು ವಳಗೆರೆಹಳ್ಳಿಗೆ ಬಂದು ನೆಲಸಿದ್ದರು ಎಂದರೆ ನಿಜ. ಚಿಕ್ಕನಹಳ್ಳಿ ಗ್ರಾಮದಲ್ಲಿ ನನ್ನ ತಂದೆ ಮತ್ತು ನಿಂಗಾಚಾರಿಗೆ ಆಸ್ತಿಗಳಲ್ಲಿ ಯಾವುದೇ ಭಾಗ ಬಂದಿಲ್ಲ ಎಂದರೆ ನಿಜ. ಚಿಕ್ಕನಹಳ್ಳಿಯಲ್ಲಿ ಆಸ್ತಿಗಳು ಇದ್ದವೋ ಇಲ್ಲವೋ ಅಂತ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ನಿಂಗಾಚಾರಿ ವಳಗೆರೆಹಳ್ಳಿಗೆ ಬಂದ ನಂತರ ಮರಗೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಬೇರೆ ಬೇರೆಯಾಗಿ ಮಾಡುತ್ತಿದ್ದರು ಎನ್ನುತ್ತಾರೆ. ಮರಗೆಲಸ ಎಂದರೆ ಪಿಠೋಪಕರಣಗಳು ಮತ್ತು ವ್ಯವಸಾಯದ ಉಪಕರಣಗಳು ಅಂದರೆ ನೇಗಿಲು, ನೊಗ ಇತ್ಯಾದಿಗಳನ್ನು ತಯಾರಿಸುತ್ತಿದ್ದರು ಎಂದರೆ ನಿಜ. ಆ ರೀತಿ ರೈತರಿಗೆ ನೇಗಿಲು, ನೊಗ ಇತ್ಯಾದಿ ವ್ಯವಸಾಯದ ಉಪಕರಣಗಳನ್ನು ಮಾಡಿಕೊಡುತ್ತಿದ್ದು ಅದರ ಬಾಬ್ತು ರೈತರು ದವಸ ಧಾನ್ಯಗಳನ್ನು ಅಡದೆ ರೂಪದಲ್ಲಿ ಕೊಡುತ್ತಾ ಇದ್ದರು ಎಂದರೆ ನಿಜ. ನನ್ನ ತಂದೆ ನಂಜಾಚಾರಿಗೆ ಸುಮಾರು 500 ಕುಳ ಮನೆಗಳು ಹಾಗೂ ನಿಂಗಾಚಾರಿಗೆ ಪ್ರತ್ಯೇಕವಾಗಿ ಸುಮಾರು 400 ಕುಳ ಮನೆಗಳು ಇದ್ದವು ಎಂದರೆ ನಿಜ. ವಳಗೆರೆಹಳ್ಳಿ ಗ್ರಾಮದಲ್ಲಿ ಸುಮಾರು 2000 ಕ್ಕೂ ಹೆಚ್ಚು ಮನೆಗಳು ಇರುತ್ತವೆ ಎಂದರೆ ನಿಜ. ನನ್ನ ತಂದೆಗೆ ಮರಗೆಲಸದ ಉದ್ಯೋಗವನ್ನು ಬಿಟ್ಟು ಬೇರೆ ಯಾವುದೇ ಉದ್ಯೋಗ ಇರಲಿಲ್ಲ ಎಂದರೆ ನಿಜ. ಅಡದೆ ರೂಪದಲ್ಲಿ ಬರುತ್ತಾ ಇದ್ದ ದವಸ ಧಾನ್ಯಗಳನ್ನು ಕುಟುಂಬಕ್ಕೆ ಸಾಕಾಗುವಷ್ಟು ಇಟ್ಟುಕೊಂಡು ಉಳಿದ ದವಸ ಧಾನ್ಯಗಳನ್ನು ಮಾರಾಟ ಮಾಡುತ್ತಿದ್ದರು ಎಂದರೆ ನಿಜ. ನನ್ನ ತಂದೆಯವರು ಮರಗೆಲಸದಿಂದ ಬಂದ ಆದಾಯದಿಂದ ದಾವಾ ಜಮೀನುಗಳು ಮತ್ತು ನಿವೇಶನಗಳನ್ನು ಖರೀದಿ ಮಾಡಿದ್ದರು ಎಂದರೆ ನಿಜ. ನನ್ನ ತಂದೆಯವರು ಮಾಡುತ್ತಿದ್ದ ಮರಗೆಲಸದಲ್ಲಿ ನಾನು ಮತ್ತು ನನ್ನ ಅಣ್ಣ ನನ್ನ ತಂದೆಯವರಿಗೆ ಚಿಕ್ಕಂದಿ ನಿಂದಲೂ ಸಹಾಯ ಮಾಡುತ್ತಿದ್ದೆವು ಎಂದರೆ ನಿಜ. ನಮ್ಮ ಮೂರು ಜನರ ಒಟ್ಟು ಪರಿಶ್ರಮದಿಂದ ದಾವಾ ಆಸ್ತಿಗಳನ್ನು ನಮ್ಮ ತಂದೆಯವರ ಹೆಸರಿನಲ್ಲಿ ಖರೀದಿ ಮಾಡಿದ್ದೇವೆ ಎಂದರೆ ನಿಜ.

ನನಗೆ ಮತ್ತು ನನ್ನ ಅಣ್ಣ 1ನೇ ಪ್ರತಿವಾದಿಗೆ ಯಾವುದೇ ದುರಾಭ್ಯಾಸಗಳು ಅಂದರೆ ಮದ್ಯಪಾನ, ಜೂಜಾಟ ಮತ್ತು ಧೂಮಪಾನ ಇತ್ಯಾದಿಗಳು ಇರುವುದಿಲ್ಲ. ನಮ್ಮ ಮದುವೆ ಆದ ನಂತರ ನಮ್ಮ ನಮ್ಮ ಹೆಂಡತಿ ಮಕ್ಕಳುಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದೇವೆ ಎಂದರೆ ನಿಜ. ನಾವುಗಳು ನಮ್ಮ ತಂದೆ ತಾಯಿಗೆ ತೊಂದರೆ ಕೊಡುವುದಾಗಲಿ ಅಥವಾ ಮನೆ ಬಿಟ್ಟು ಹೋಗುವುದಾಗಲಿ ಮಾಡುತ್ತಾ ಇರಲಿಲ್ಲ. ನಮ್ಮ ತಂದೆಗೆ ನಾನು ಮತ್ತು ನನ್ನ ಅಣ್ಣ ಚಿಕ್ಕಂದಿ

ನಿಂದಲೂ ಸಹಾಯ ಮಾಡುತ್ತಿದ್ದುದರಿಂದ ನನಗೆ ಮತ್ತು ನನ್ನ ಅಣ್ಣನಿಗೆ ಕುಟುಂಬದ ಆಸ್ತಿಗಳನ್ನು ಕೊಡುವ ಮನಸ್ಸು ಇತ್ತು ಎಂದರೆ ನಿಜ. ಹಾಗಾಗಿ ನನ್ನ ತಂದೆಯವರು 1992 ನೇ ಜೂನ್ ತಿಂಗಳಲ್ಲಿ ನನಗೆ ಮತ್ತು ನನ್ನ ಅಣ್ಣ 1ನೇ ಪ್ರತಿವಾದಿಗೆ ಕುಟುಂಬದ ಆಸ್ತಿಗಳನ್ನು ಭಾಗ ಮಾಡಿಕೊಟ್ಟರು ಎಂದರೆ ಸರಿಯಲ್ಲ.

ದಾವಾ ಐಟಂ ನಂ 1 ರ 23 ಗುಂಟೆ ಪೈಕಿ ಪೂರ್ವ ದಿಕ್ಕಿನಲ್ಲಿ 1ನೇ ಪ್ರತಿವಾದಿ ಮತ್ತು ಪಶ್ಚಿಮ ದಿಕ್ಕಿನಲ್ಲಿ ನನ್ನ ತಾಯಿ ಅಂದರೆ 1ನೇ ವಾದಿ ಅನುಭವ ಮಾಡುತ್ತಿದ್ದಾರೆ. 1ನೇ ಪ್ರತಿವಾದಿ ಪೂರ್ವ ದಿಕ್ಕಿನಲ್ಲಿ ಅನುಭವದಲ್ಲಿರುವ ಜಮೀನಿನ ಚಕ್ಕುಬಂದಿಯ ಪೂರ್ವಕ್ಕೆ: ಈರೇಗೌಡ, ಪಶ್ಚಿಮಕ್ಕೆ: ಉಳಿಕೆ ಜಮೀನು, ಉತ್ತರಕ್ಕೆ: ಈರೇಗೌಡನ ಮಗ ಚನ್ನಪ್ಪ ಮತ್ತು ದಕ್ಷಿಣಕ್ಕೆ: ಮಾದಯ್ಯನ ಜಮೀನು ಬರುತ್ತದೆ ಎಂದರೆ ಸರಿ. ಸದರಿ 1ನೇ ಪ್ರತಿವಾದಿ ಅನುಭವದಲ್ಲಿರುವ ಜಮೀನಿನ ವಿಸ್ತೀರ್ಣ 12 ಗುಂಟೆ ಇರುತ್ತದೆ ಎಂದರೆ ಸಾಕ್ಷಿಯು ಅಳತೆ ಮಾಡಿಲ್ಲ ಎನ್ನುತ್ತಾರೆ. ಪಶ್ಚಿಮ ದಿಕ್ಕಿನಲ್ಲಿ ನನ್ನ ಭಾಗಕ್ಕೆ ಬಂದ 11 ಗುಂಟೆ ಜಮೀನಿನಲ್ಲಿ ನಾನು ಸ್ವಾಧೀನಾನುಭವದಲ್ಲಿದ್ದು ನನ್ನ ತಾಯಿಯವರು ಸ್ವಾ ಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ 2 ರ 1 ಎಕರೆ ಜಮೀನು ನನ್ನ ಭಾಗಕ್ಕೆ ಬಂದಿದ್ದು ನಾನು ಸ್ವಾ ಧೀನಾನುಭದಲ್ಲಿದ್ದೇನೆ ಎಂದರೆ ಸಾಕ್ಷಿಯು ನಾನು, ನನ್ನ ತಾಯಿ ಮತ್ತು ನನ್ನ ತಂಗಿಯರು ಎಲ್ಲರೂ ಸ್ವಾಧೀನದಲ್ಲಿ ಇದ್ದೇವೆ ಎನ್ನುತ್ತಾರೆ. ಸದರಿ 1 ಎಕರೆ ಜಮೀನಿನಲ್ಲಿ ಯಾರು ಯಾರು ಎಷ್ಟು ಎಷ್ಟು ವಿಸ್ತೀರ್ಣದಲ್ಲಿ ಸ್ವಾಧೀನದಲ್ಲಿ ಇದ್ದೇವೆ ಎಂದರೆ ಸಾಕ್ಷಿಯು ಅಳತೆ ಮಾಡಿಲ್ಲ ಎನ್ನುತ್ತಾರೆ. ಸದರಿ 1 ಎಕರೆ ಪೈಕಿ ನಾನು, ನನ್ನ ತಾಯಿ ಮತ್ತು ನನ್ನ ತಂಗಿಯರು ಪ್ರತ್ಯೇಕವಾಗಿ ಸ್ವಾಧೀನದಲ್ಲಿರುವ ವಿಸ್ತೀರ್ಣಗಳ ಚಕ್ಕುಬಂದಿಯನ್ನು ನನಗೆ ಹೇಳಲಾಗುವುದಿಲ್ಲ.

ದಾವಾ 3ನೇ ಐಟಂನ 1 ಎಕರೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಮತ್ತು ಉತ್ತರಕ್ಕೆ: ಸವಡೆ ಬೋರಯ್ಯ, ಪಶ್ಚಿಮಕ್ಕೆ: ಹಳ್ಳ ಮತ್ತು ದಕ್ಷಿಣಕ್ಕೆ: ದಾವಾ 2ನೇ ಐಟಂ ಸ್ವತ್ತು ಬರುತ್ತಿದ್ದು ಸದರಿ ಜಮೀನಿನಲ್ಲಿ 1ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ನಿಜ. ಸದರಿ ಜಮೀನಿನಲ್ಲಿ 1ನೇ ಪ್ರತಿವಾದಿಯು ತನ್ನ ಭಾಗಕ್ಕೆ ಬಂದ ಲಾಗಾಯ್ತಿನಿಂದ ಅಂದರೆ 1992 ರಿಂದ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ.

ದಾವಾ 4ನೇ ಐಟಂ ಸ್ವತ್ತಿನ ನಿವೇಶನವನ್ನು ಖರೀದಿಸಿದ ನಂತರ ಅದರಲ್ಲಿ ನಾನು, ನನ್ನ ತಂದೆ ಮತ್ತು ನನ್ನ ಅಣ್ಣ 1ನೇ ಪ್ರತಿವಾದಿ ಎಲ್ಲರೂ ಒಟ್ಟಿಗೆ ಸೇರಿ ಮನೆಯನ್ನು ನಿರ್ಮಿಸಿದ್ದೇವೆ ಎಂದರೆ ನಿಜ. ಸದರಿ ಮನೆಯ ಬಾಗಿಲು ದಕ್ಷಿಣ ದಿಕ್ಕಿಗೆ ಇರುತ್ತದೆ ಎಂದರೆ ನಿಜ. ಸದರಿ ಮನೆಯ ಬಾಗಿಲು ದಾಟಿ ಒಳಗೆ ಹೋದರೆ 2 ಬದಿಗಳಲ್ಲಿ 2 ಅಂಗಡಿ ಮನೆಗಳು ಇರುತ್ತವೆ ಎಂದರೆ ನಿಜ. ಸದರಿ ಸ್ವತ್ತಿನ ಪೂರ್ವ ದಿಕ್ಕಿನ ಕಡೆ ರಸ್ತೆ ಇದ್ದು ಸದರಿ ರಸ್ತೆ ಬದಿಯಲ್ಲಿ ಒಂದನೇ ಪ್ರತಿವಾದಿಯು ಒಂದು ಅಂಗಡಿ ನಡೆಸುತ್ತಿದ್ದಾರೆ ಎಂದರೆ ನಿಜ. ಸದರಿ ಪೂರ್ವ ದಿಕ್ಕಿನ ಕಡೆ ಇರುವ ಅಂಗಡಿ ಮನೆಯಲ್ಲಿ ಒಂದನೇ ಪ್ರತಿವಾದಿಯು ಟೈಲರಿಂಗ್ ಶಾಪ್ ನಡೆಸುತ್ತಿದ್ದಾರೆ ಎಂದರೆ ನಿಜ. 2010ನೇ

ಇಸವಿಯಲ್ಲಿ ಮಳೆ ಗಾಳಿಗೆ ಪೂರ್ವ ಭಾಗದ ಮನೆಯ ಗೋಡೆ ಕುಸಿದು ಬಿದ್ದು ಹೋಗಿತ್ತು ಎಂದರೆ ನಿಜ. ಆ ರೀತಿ ಪ್ರಕೃತಿ ವಿಕೋಪದಿಂದ ಮನೆಯ ಗೋಡೆ ಬಿದ್ದು ಹೋಗಿದ್ದ ಕಾರಣ ಸರ್ಕಾರದವರು ಒಂದನೇ ಪ್ರತಿವಾದಿಗೆ ರೂ. 2,000-00 ಮತ್ತು ತಾಲ್ಲೋಕು ಪಂಚಾಯಿತಿಯವರು ರೂ. 500-00 ಪರಿಹಾರ ಧನ ನೀಡಿದ್ದಾರೆ ಎಂದರೆ ನಿಜ. ಸಾಕ್ಷಿಯು ಸ್ವತಃ ಹೇಳುತ್ತಾರೆ ನನ್ನ ತಾಯಿಯವರಿಗೂ ಪರಿಹಾರ ಕೊಟ್ಟಿದ್ದಾರೆ ಎಂದು. ನನ್ನ ತಾಯಿ ವಾಸ ಇರುವ ಭಾಗ ಬಿದ್ದು ಹೋಗಿರಲಿಲ್ಲ. ನನ್ನ ತಾಯಿಯವರಿಗೂ ಸಹ ಸರ್ಕಾರದವರು ಮತ್ತು ತಾಲ್ಲೋಕು ಪಂಚಾಯಿತಿಯವರು ಪರಿಹಾರ ಧನ ಕೊಟ್ಟಿದ್ದಾರೆ ಎಂಬುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4ನೇ ಐಟಂ ಸ್ವತ್ತಿನ ಮನೆಯ ಪೂರ್ವದ 27 X 60 ಅಡಿ ಜಾಗ 1ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸುಳ್ಳು. ನಾನು ವಾಸ ಇರುವ ಮಧ್ಯಭಾಗ 13 X 60 ಮತ್ತು ಪಶ್ಚಿಮದ ನಮ್ಮ ತಾಯಿ ವಾಸ ಇರುವ 10 X 60 ಅಡಿ ಜಾಗ ಒಟ್ಟು 23 X 60 ಅಡಿ ಜಾಗದ ಮನೆ 1992 ರ ವಿಭಾಗದಲ್ಲಿ ನನ್ನ ಭಾಗಕ್ಕೆ ಬಂದಿರುತ್ತದೆ ಎಂದರೆ ಸುಳ್ಳು. ದಾವಾ ಸ್ವತ್ತುಗಳನ್ನು ನಾನು, ನನ್ನ ಅಣ್ಣ 1ನೇ ಪ್ರತಿವಾದಿ ಮತ್ತು ನನ್ನ ತಂದೆ ಮೂರು ಜನ ಒಟ್ಟಿಗೆ ಸೇರಿ ಸಂಪಾದನೆ ಮಾಡಿದ್ದರಿಂದ ಮತ್ತು 1992 ರಲ್ಲಿ ಈಗಾಗಲೇ ನಮ್ಮ ತಂದೆಯವರು ಸದರಿ ಸ್ವತ್ತುಗ್ಗಳಲ್ಲಿ ಯಾವುದೇ ಹಕ್ಕು ಉಳಿಸಿಕೊಳ್ಳದೆ ಭಾಗ ಕೊಟ್ಟಿರುವುದರಿಂದ ನಮ್ಮ ಅಕ್ಕತಂಗಿಯರಿಗೆ ಸದರಿ ಸ್ವತ್ತುಗ್ಗಳಲ್ಲಿ ಯಾವುದೇ ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ನನ್ನ ಅಕ್ಕತಂಗಿಯರು ಯಾವಾಗಲೂ ಸಹ ದಾವಾ ಆಸ್ತಿಗಳಲ್ಲಿ ಜಂಟಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ 1 ರ ಪೂರ್ವದ 12 ಗುಂಟೆ, ದಾವಾ ಐಟಂ 3 ರ ಪೂರ್ತಾ ಸ್ವತ್ತು, ದಾವಾ ಐಟಂ 4 ರ ಪೂರ್ವದ 27 X 60 ಅಡಿ ಸ್ವತ್ತುಗ್ಗಳು 1992 ರ ವಿಭಾಗದಲ್ಲಿ ನನ್ನ ಅಣ್ಣ 1ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿರುತ್ತವೆ ಎಂದರೆ ಸುಳ್ಳು. ದಾವಾ ಐಟಂ 1 ರಲ್ಲಿ ಪಶ್ಚಿಮದ 11 ಗುಂಟೆ, ದಾವಾ ಐಟಂ 2 ರ ಪೂರ್ತಾ ಸ್ವತ್ತು ಮತ್ತು ದಾವಾ ಐಟಂ 4 ರಲ್ಲಿ ಪಶ್ಚಿಮದ 13 X 60 ಜಾಗ ಮತ್ತು ದಾವಾ ಐಟಂ ನಂ 5 ರ ಪೂರ್ತಾ ಸ್ವತ್ತು ಸದರಿ ವಿಭಾಗದಲ್ಲಿ ನನ್ನ ಭಾಗಕ್ಕೆ ಬಂದಿರುತ್ತವೆ ಎಂದರೆ ಸುಳ್ಳು. ನನ್ನ ಅಕ್ಕತಂಗಿಯರು ಮದುವೆಯಾದ ನಂತರ ಅವರವರ ಗಂಡಂದಿರ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿಯು ಆಗಾಗ ಬಂದು ವಾರ, ಹದಿನೈದು ದಿನಗಳವರೆಗೆ ಹೋಗುತ್ತಾರೆ ಎಂಬುದಾಗಿ ನುಡಿಯುತ್ತಾರೆ. ವ್ಯವಸಾಯದ ಕಾಲದಲ್ಲಿ ನಮ್ಮ ಅಕ್ಕತಂಗಿಯರು ಅವರವರ ಭಾಗಕ್ಕೆ ಇರುವ ಜಮೀನುಗಳನ್ನು ಉಳುಮೆ ಮಾಡಿಸಲು ಆ ರೀತಿ ಬಂದು ಹೋಗುತ್ತಾರೆ. ಆ ರೀತಿ ಬಂದಾಗ ನಮ್ಮ ತಾಯಿಯವರ ಮನೆಯಲ್ಲಿ ಉಳಿದು ಕೊಳ್ಳುತ್ತಾರೆ. ವ್ಯವಸಾಯದ ಉಪಕರಣಗಳನ್ನು ಸಹ ನಮ್ಮ ತಾಯಿಯವರ ಮನೆಯಲ್ಲಿಯೇ ಇಟ್ಟುಕೊಂಡಿರುತ್ತಾರೆ. ನಮ್ಮ ಅಕ್ಕತಂಗಿಯರು ಆಗಾಗ ಬಂದು ಜಮೀನುಗಳನ್ನು ಉಳುಮೆ ಮಾಡಿಸಿಕೊಂಡು ಹೋಗುತ್ತಾರೆ ಎಂಬುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1ನೇ ಪ್ರತಿವಾದಿ ತನ್ನ ಪೂರ್ವ ಭಾಗದ ಮನೆಯನ್ನು ರಿಪೇರಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. 2, 3, 5 ಮತ್ತು 9ನೇ ವಾದಿಯರು ಬೆಂಗಳೂರಿನಲ್ಲಿ ವಾಸ ಇದ್ದಾರೆ ಎಂದರೆ ನಿಜ. 7ನೇ ವಾದಿ ಮೈಸೂರಿನಲ್ಲಿ ವಾಸ ಇದ್ದಾರೆ ಎಂದರೆ ನಿಜ. 8ನೇ ವಾದಿ ಹೆಮ್ಮನಹಳ್ಳಿಯಲ್ಲಿ ವಾಸ ಇದ್ದಾರೆ ಎಂದರೆ ನಿಜ. 10ನೇ ವಾದಿ ಚಾಮರಾಜನಗರದಲ್ಲಿ ವಾಸ ಇದ್ದಾರೆ ಎಂದರೆ ನಿಜ. ಜಮೀನುಗಳ ಆರ್ ಟಿ ಸಿ ಮತ್ತು ಮ್ಯುಟೇಷನ್ ನಮ್ಮ ನಮ್ಮ ಹೆಸರಿಗೆ ಪ್ರತ್ಯೇಕವಾಗಿ ಬಂದಿರುತ್ತವೆ ಎಂದರೆ ಸುಳ್ಳು. 1992 ರಲ್ಲಿ ಆಸ್ತಿಗಳು ವಿಭಾಗ ಆಗಿದ್ದರೂ ಸಹ 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು, ನನ್ನ ತಾಯಿ ಮತ್ತು ಅಕ್ಕತಂಗಿಯರು ಸೇರಿಕೊಂಡು ಆತನ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ 1ನೇ ಪ್ರತಿವಾದಿ ಒಕ್ಕಲಿಗ ಜನಾಂಗದ ಹುಡುಗಿಯನ್ನು ಮದುವೆ ಮಾಡಿಕೊಂಡಿದ್ದಾರೆ ಎಂದರೆ ನಿಜ. ಆ ರೀತಿ ಮದುವೆಯಾಗುವುದು ನನ್ನ ತಾಯಿಯವರಿಗೆ ಇಷ್ಟ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ತಂದೆ ಮತ್ತು ತಾಯಿ ಇಬ್ಬರಿಗೂ ಇಷ್ಟ ಇರಲಿಲ್ಲ ಎನ್ನುತ್ತಾರೆ. ನಮ್ಮ ತಂದೆಯವರಿಗೆ ಆ ರೀತಿ ಇಷ್ಟ ಇರಲಿಲ್ಲ ಎಂಬುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಚಾರದಲ್ಲಿ ನಾನು ಮತ್ತು ನನ್ನ ಅಕ್ಕತಂಗಿಯರು ನನ್ನ ತಾಯಿಯ ಪರವಾಗಿ ಇದ್ದೇವೆ ಎಂದರೆ ನಿಜ. ಆ ಕಾರಣದಿಂದ ಮೊದಲಿನಿಂದಲೂ ನಮ್ಮ ಮತ್ತು 1ನೇ ಪ್ರತಿವಾದಿಯ ನಡುವೆ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. 1992 ರಲ್ಲಿ ಈಗಾಗಲೇ ಕುಟುಂಬದ ಆಸ್ತಿಗಳು ವಿಭಾಗ ಆಗಿರುವುದರಿಂದ ಮತ್ತು ನಮ್ಮ ನಮ್ಮ ಭಾಗಕ್ಕೆ ಬಂದ ಜಮೀನುಗಳು ಮತ್ತು ಮನೆಯಲ್ಲಿ ಸ್ವಾಧೀನದಲ್ಲಿ ಇದ್ದಾಗ್ಯೂ ಸಹ 1ನೇ ಪ್ರತಿವಾದಿಗೆ ವಿನಾಕಾರಣ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಒ.ಹೇ.ಕೇ. ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮದ್ದೂರು.**